ಚಿಂತನೆ ಮಾಡದೇ ಮುಂದಿನ ಜನಾಂಗದ ಭವಿಷ್ಯಕ್ಕಾಗಿ ಚಿಂತನೆ ಮಾಡಬೇಕು. ಸರ್ಕಾರ ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಅದಕ್ಕಾಗಿ ನಾನು ಈ ಒಂದು ಬಜೆಟ್ ಅನ್ನು ವಿರೋಧ ಮಾಡುತ್ತೇನೆ.

6. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ: ಬಾದಾಮಿ ತಾಲ್ಲೂಕಿನ ಹರೇಬೂದಿಹಾಳ ಗ್ರಾಮದ ಹತ್ತಿರವಿರುವ ಸೇತುವೆ ಮಳೆಯಿಂದ ಕೊಚ್ಚಿಹೋಗಿರುವ ಕುರಿತು,

ಶ್ರೀ ಮೇಟಿ ಹುಲ್ಲಪ ಯಮನಪ್ಪ, (ಗುಳೇದಗುಡ್ಡ) : ಮಾನ್ಯ ಉಪಾಧ್ಯಕ್ಷರೆ, ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಗ್ರಾಮದ ಹತ್ತಿರವಿರುವ ಸೇತುವೆ ಮಳೆಯಿಂದ ಕೊಚ್ಚಿಹೋಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬಾದಾಮಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಮತಗಿ – ಅಗಸನಕೊಪ್ಪ ಮುಖ್ಯ ರಸ್ತೆಯಿಂದ ಹಿರೇಬೂಡಿಹಾಳ ಕೂಡು ರಸ್ತೆಯು ಒಟ್ಟು 1.30 ಕಿ.ಮೀ. ಇದ್ದು ಕಿ.ಮೀ. 0.00 ದಿಂದ 0.50 ಕಿ.ಮೀ. ವರೆಗೆ ಡಾಂಬರೀಕರಣವಾಗಿದ್ದು, ಬಾಕಿ ಉದ್ದವು ಜಲ್ಲಿ ಮೇಲ್ಪ್ಪೆ ಹೊಂದಿರುತ್ತದೆ. ಹಿರೇಬೂದಿಹಾಳ ಗ್ರಾಮದ ಹತ್ತಿರ ಇದ್ದ ಕೆಳಮಟ್ಟದ ಸೇತುವೆಯು ಸದರಿ ರಸ್ತೆಯ ಕಿ.ಮೀ. 1.00 ರಲ್ಲಿ ಬರುತ್ತಿದ್ದು ಇದನ್ನು 1998ನೇ ಸಾಲಿಗಿಂತ ಮೊದಲು ನಿರ್ಮಿಸಲಾಗಿತ್ತು. ಸದರಿ ಸೇತುವೆಯ ಉದ್ದವು 35.00 ಮೀ. ಉದ್ದವಿರುತ್ತದೆ. ಹಿರೇಬೂದಿಹಾಳ ಗ್ರಾಮದ ಜನಸಂಖ್ಯೆಯು 1340 ಇರುತ್ತದೆ. ಸದರಿ ರಸ್ತೆಯ ಮೇಲೆ ಭಾರಿ ವಾಹನಗಳು ಸೇರಿ ಸುಮಾರು 25 ಸಂಖ್ಯೆ ವಾಹನಗಳು ಪ್ರತಿದಿನ ಸಂಚರಿಸುತ್ತವೆ. ಈ ರಸ್ತೆಯು ಬಾದಾಮಿ, ಗುಳೇದಗುಡ್ಡ, ಗುಳೇದಗುಡ್ಡ ರೈಲ್ವೆ ಸ್ಟೇಶನ್, ಹುಲಸಗೇರಿ, ಅಗಸನಕೊಪ್ಪಾ, ಕೆಲೂಡಿ, ತೋಗುಣಸಿ, ಜಮ್ಮನಟ್ಟಿ, ಖಾಜಿಬೀಳಗಿ ಮತ್ತು ಕೋಟಿಕಲ್ ಗ್ರಾಮಗಳನ್ನು ಸಂಪರ್ಕಿಸುತ್ತದೆ.

2001–02ನೇ ಸಾಲಿನಲ್ಲಿ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯಡಿ ರೂ. 1.00 ಲಕ್ಷದ ವೆಚ್ಚದಲ್ಲಿ ಈ ಸೇತುವೆಯನ್ನು ದುರಸ್ತಿಗೊಳಿಸಲಾಗಿದೆ.

2004–05ನೇ ಸಾಲಿನಲ್ಲಿ ಬಂದ ಭಾರಿ ಮಳೆಯಿಂದ ಈ ಸೇತುವೆಯು ಕೊಚ್ಚಿಕೊಂಡು ಹೋಗಿ ಸಂಪರ್ಕ ಕಡಿದು ಹೋಗಿರುತ್ತದೆ. ಈ ಸೇತುವೆಯ ಬದಲಾಗಿ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಸೇತುವೆ ನಿರ್ಮಾಣಕ್ಕಾಗಿ ಅಂದಾಜು ರೂ. 92.00 ಲಕ್ಷಗಳ ಅವಶ್ಯಕತೆಯಿದ್ದು ಅಂದಾಜನ್ನು ತಯಾರಿಸಲಾಗಿದೆ ಹಾಗೂ ತಾಂತ್ರಿಕ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್.ವೈ. ಮೇಟಿ : ಹಿರೇಬೂದಿಹಾಳ ರಸ್ತೆ, ಇದು main ರಸ್ತೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು main ರಸ್ತೆಯಲ್ಲಿ ಬರುವುದಿಲ್ಲ. ಇದು main ರಸ್ತೆ ಬಿಟ್ಟು ಒಂದು ಕಿ.ಮೀ. ಎರಡು ಫರ್ಲಾಂಗು ಒಳಗೆ ಹೋದರೆ ಈ ಊರು ಬರುತ್ತದೆ. ಆ ಹಳ್ಳ ದಾಟಿ ಊರಿಗೆ ಹೋಗಬೇಕು. ಆ ಊರಿಗೆ ಬೇರೆ ಯಾವುದೇ ರಸ್ತೆ ಇಲ್ಲ. ಮಳೆ ಬಂತು ಎಂದರೆ ಜನ ಜಾನುವಾರು ಆಚೆ ಕಡೆಯಿಂದ ಈ ಕಡೆಗೆ ಓಡಾಡುವುದಕ್ಕಾಗುವುದಿಲ್ಲ. ಅಲ್ಲಿಗೆ ಯಾವುದೇ ಸಂಪರ್ಕವಿಲ್ಲ. ಈಗಾಗಲೇ ಇದರ ಸಲುವಾಗಿ ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹತ್ತಿರ ಹಲವಾರು ಬಾರಿ ಹೋಗಿದ್ದೇನೆ. ನಂತರ ಜಿಲ್ಲಾ ಮಂತ್ರಿಗಳ ಹತ್ತಿರ ಹೋಗಿದ್ದೇನೆ. ಇತ್ತೀಚೆಗೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಹತ್ತಿರ ಹೋಗಿ request ಮಾಡಿಕೊಂಡೆ. ಇದಕ್ಕೆ ಸುಮಾರು 92 ಲಕ್ಷ ರೂಪಾಯಿಗಳ estimate ಆಗಿದೆ. ಎರಡು ವರ್ಷಗಳಿಂದಲೂ ಮಳೆ ಬಂದಾಗ ಇಲ್ಲಿ ಜನರಿಗೆ ಓಡಾಡಲಿಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ಯಾವುದೇ ರಸ್ತೆ ಇಲ್ಲ. ಬೇರೆ ಊರಿಗೆ ಹೋಗುವುದಕ್ಕೆ ಆಗುವುದಿಲ್ಲ. Main ರಸ್ತೆ ಇದೊಂದೇ. ಆವತ್ತಿನ ದಿವಸ ನಾನು, ಆವತ್ತಿನ ದಿವಸ ಜಿಲ್ಲಾಧಿಕಾರಿಗಳು, ಆವತ್ತಿನ ದಿವಸ ಮುಖ್ಯ ಕಾರ್ಯದರ್ಶಿಗಳು ಎಲ್ಲರೂ ಹೋಗಿ ನೋಡಿದ್ದೇವೆ. Photo ಸಹಿತ ಕೊಟ್ಟಿದ್ದೇನೆ. ಇವತ್ತು estimate ಸಹಿತ ತಯಾರಾಗಿದೆ. ಅಂದಾಜು ಕೂಡ ತಯಾರಾಗಿದೆ. ಇದಕ್ಕೆ ದುಡ್ಡು ಯಾವಾಗ ಕೊಡುತ್ತಾರೆಂದು ಹೇಳಬೇಕು. ಕೇವಲ ನಾವು ಮುಂದೆ ನಬಾರ್ಡ್‌ನಲ್ಲಿ ಮಾಡುತ್ತೇವೆ, ನೋಡುತ್ತೇವೆಂದು ಹೇಳುವುದು, ಆಗಬಾರದು. ಇವತ್ತಿಗೂ ಆ ರಸ್ತೆ ಹದಗೆಟ್ಟಿದೆ ಒಂದು ದಿವಸವಾದರೂ ಜಿಲ್ಲಾ ಪಂಚಾಯಿತಿಯವರು ಬಂದು ವರ್ಕ್ ಮಾಡಿಲ್ಲ. ಅಡ್ಡಾಡಲಿಕ್ಕೆ ಬರದಂಥ ಸ್ಥಿತಿಯಲ್ಲಿ ಆ ರಸ್ತೆ ಇದೆ. ಮಳೆಯಾಯಿತು ಎಂದರೆ ಮರುದಿವಸ ರೈತರೇ ಆ ರಸ್ತೆಯನ್ನು ಮಾಡಿಕೊಳ್ಳಬೇಕು. ಯಾವುದರಲ್ಲಿ ದುಡ್ಡು ಕೊಡುತ್ತೀರಿ? ಈ ಕೆಲಸ ತುರ್ತಾಗಿ ಆಗಬೇಕು. ಬರಿ ಕೇವಲ ಭರವಸೆ, ಆಶ್ವಾಸನೆ ಕೊಡಬಾರದು, ಕಾಲಮಿತಿ ಹಾಕಿ ಇದಕ್ಕೆ ಯಾವಾಗ ದುಡ್ಡು ಕೊಟ್ಟು ಮಾಡಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಎಷ್ಟು ದಿವಸದೊಳಗೆ ಮಾಡಿ ಕೊಡುತ್ತೀರಿ ಹೇಳಬೇಕು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಸಚಿವರು) : ಅವರು ನನ್ನ ಜೊತೆಗೆ ಚರ್ಚೆ ಮಾಡಿದಾಗ 40 ಲಕ್ಷ ರೂಪಾಯಿಗಳಷ್ಟು ಹಣವನ್ನು ತಮ್ಮ ವಿಧಾನ ಸಭಾ ಸದಸ್ಯರ ಅನುದಾನ ಮತ್ತು 12ನೇ ಹಣಕಾಸಿನ ಅನುದಾನವನ್ನು ಅದಕ್ಕೆ ಮೀಸಲಾಗಿರಿಸಿಟ್ಟಿದ್ದೇವೆ. ಉಳಿದ ಹಣಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವ ಬೇಡಿಕೆ ಇಟ್ಟಿದ್ದಾರೆ. ಅತಿ ಶೀಘ್ರದಲ್ಲಿ ಇದಕ್ಕೊಂದು ಪ್ರಸ್ತಾವನೆ ಸಲ್ಲಿಸಿ ಹಣ ಪಡೆದು ಕೆಲಸ ಮಾಡುವಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ವೈ. ಮೇಟಿ : ಶೀರ್ಘ್ರದಲ್ಲಿ ಎಂದು ಹೇಳಬೇಡಿ. ಎಷ್ಟು ದಿವಸದಲ್ಲಿ ಮಾಡಿಕೊಡುತ್ತೀರಿ? ಅಲ್ಲಿ ಎರಡು ಸಾವಿರ ಜನಸಂಖ್ಯೆವಿರುವ ರೈತರ ಊರು ಮಳೆ ಬಂತು ಎಂದರೆ ದಂಡೆಯ ಆಚೆಕಡೆಗೆ ಬಂಡಿ ನಿಲ್ಲಬೇಕು. ಮರುದಿವಸ ಮುಂಜಾನೆ ರಸ್ತೆ ಮಾಡಿಯೇ ಆ ಬಂಡಿಯನ್ನು ತರಬೇಕು. ಈ ಪರಿಸ್ಥಿತಿ ಇದೆ. ಈ ಮೊದಲೇ ನಾನು ಮಾನ್ಯ ಯಡಿಯೂರಪ್ಪನವರಿಗೂ ಮನವಿ ಮಾಡಿದ್ದೇನೆ. CMGSY, ಅಥವಾ ಮುಖ್ಯಮಂತ್ರಿಗಳ ಪರಿಹಾರ ನಿಧಿ, ಅಥವಾ ಫ್ಲಡ್‌ನಲ್ಲಾಗಲೀ ಯಾವುದರಲ್ಲಿ ಹಣ ಕೊಡುತ್ತೀರಿ ಹೇಳಿ.

ಶ್ರೀ ಸಿ.ಎಂ. ಉದಾಸಿ : ನಾನು ಅವರ ಹತ್ತಿರ ಖಾಸಗಿಯಾಗಿ ಮಾತನಾಡಿದಾಗ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದೇನೆ. ಅವರೇನು ಇವತ್ತು ಹಣ ಕೊಡಲಿಕ್ಕೆ ಒಪ್ಪಿದ್ದಾರೆ ಅದಕ್ಕೆ ಪ್ರಸ್ತಾವನೆಯನ್ನು ಕೊಟ್ಟ ಕೂಡಲೇ ಉಪ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಅತಿ ಶೀರ್ಘ್ರದಲ್ಲಿ ಅದನ್ನು ಮಾಡಿಸಿ ಕೊಡುತ್ತೇವೆ.

ಶ್ರೀ ಹೆಚ್.ವೈ. ಮೇಟಿ : ಜಿಲ್ಲಾ ಪರಿಷತ್ತಿನಲ್ಲಿ ದುಡ್ಡು ಇದೆ, ಅದನ್ನು ಮಾಡಿಸಿಕೊಡಿ.

ಆ) ವಿಷಯ : ಲಕ್ಷೇಶ್ವರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ

ಶ್ರೀ ಜಿ.ಎಸ್. ಗಡ್ಡದೇವರ್ ಮಠ್ (ಶಿರಹಟ್ಟಿ) : ಮಾನ್ಯ ಉಪಾಧ್ಯಕ್ಷರೆ, ಲಕ್ಷೇಶ್ವರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಸನ್ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ.

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ಘೋಷಣೆ ಮಾಡಲಾಗುವುದು.

ರಾಜ್ಯ ಸರ್ಕಾರವು ಆಡಳಿತವನ್ನು ಚುರುಕುಗೊಳಿಸುವ ದೃಷ್ಟಿಯಿಂದ ಬಹಳ ಹಿಂದೆ ರಾಜ್ಯದಲ್ಲಿನ ಜಿಲ್ಲೆ, ಉಪ ವಿಭಾಗ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಶ್ರೀ ವಾಸುದೇವರಾವ್ ಆಯೋಗ (1973), ಶ್ರೀ ಬಿ.ಎಂ. ಹುಂಡೇಕರ್ ಸಮಿತಿ (1984) ಹಾಗೂ ಶ್ರೀ ಪಿ.ಸಿ. ಗದ್ದಿಗೌಡರ್ (1986) ಇವರುಗಳ ಅಧ್ಯಕ್ಷತೆಯಲ್ಲಿ ಮೂರು ಸಮಿತಿಗಳನ್ನು ರಚಿಸಿತ್ತು. ಈ ಸಮಿತಿಗಳು ಒಟ್ಟು 35 ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಇವುಗಳ ಪೈಕಿ "ಲಕ್ಷೇಶ್ವರವೂ" ಸೇರಿರುತ್ತದೆ. ಆದರೆ ಅದನ್ನು ಸೇರಿಸಬೇಕೋ ಇಲ್ಲವೋ ಎನ್ನುವುದನ್ನು ಹೊಸ ತಜ್ಞರ ಸಮಿತಿ ಪರಿಶೀಲಿಸುವುದು. ಬೆಳಿಗ್ಗೆ ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದ.